

ಪ್ರೀತಿಯೆಂಬ ಚುಂಬಕ ನಮ್ಮ ದೇಹ ಮತ್ತು ಮನಸ್ಸುಗಳನ್ನು ಅಯಸ್ಕಾಂತದಂತೆ ಆಕರ್ಷಿಸುವುದು. ಪ್ರೇಮ ನೀಡುವ ಅದ್ಭುತ ಅನುಭೂತಿಯನ್ನು ಮನುಷ್ಯರು ಸದಾ ಬಯಸುತ್ತಾರೆ.

ಬಹುತೇಕರು ಪ್ರಪಂಚದ ಲೆಕ್ಕಾಚಾರಗಳಿಗೆ ತಲೆಬಾಗಿ ಪ್ರೀತಿಯಿಂದ ದೂರ ಉಳಿದು, ಪ್ರೀತಿಯನ್ನು ಕಳೆದುಕೊಂಡು, ಇನ್ಯಾರದೋ ಜೊತೆ ಹೊಂದಾಣಿಕೆ ಮಾಡಿಕೊಂಡು, ಜೀವನ ವ್ಯವಹಾರವನ್ನು ನಿಭಾಯಿಸುವುದು ಸಾಮಾನ್ಯವಾದ ವಿಚಾರ. ಆದರೆ, ಅವರೆಲ್ಲರೂ ಈ ರಮ್ಯ ಪ್ರೀತಿಗಾಗಿ ಮಿಡುಕುವುದು ವಾಸ್ತವ ಸಂಗತಿ. ಅಕಸ್ಮಾತ್ ಅವರು ಪ್ರೀತಿಯ ಅನುಭವದಿಂದ ವಂಚಿತರಾದರೂ ಸಿನಿಮಾ ದೃಶ್ಯಗಳಲ್ಲೋ, ಕಥೆ–ಕಾದಂಬರಿಗಳನ್ನು ಓದುವಾಗಲೋ ಪ್ರೀತಿಯ ರಮ್ಯತೆಯನ್ನು ಕಾಲ್ಪನಿಕವಾಗಿ ಆವಾಹಿಸಿಕೊಂಡು ಸುಖಪಡುವುದಿದೆ. ಈ ರೀತಿಯಲ್ಲಿ ರಮ್ಯತೆಯನ್ನು ಅನುಭವಿಸಲು ವಯಸ್ಸಿನ ಅಥವಾ ಇಹಲೋಕದ ಮಿತಿಗಳ ಯಾವ ಕಟ್ಟಳೆಗಳೂ ಇಲ್ಲ ಎನ್ನುವುದು ಸಮಾಧಾನಕರ ಸಂಗತಿ.

ಈ ರಮ್ಯ ಪ್ರೀತಿಯೆನ್ನುವುದು ಎಲ್ಲ ಪ್ರಾಪಂಚಿಕ ಲೆಕ್ಕಾಚಾರಗಳನ್ನು ಮೀರಿದ ಸಂಗತಿ. ಇದು ಹೇಗೆ ಸಂಭವಿಸುತ್ತದೆ ಎಂದು ತಿಳಿದುಕೊಳ್ಳಲು ಮನುಷ್ಯ ಬಹಳ ಪ್ರಯತ್ನಪಟ್ಟಿದ್ದಾನೆ. ಈ ವಿಚಾರವನ್ನು ಎಲ್ಲ ಕೋನಗಳಿಂದ ಪರೀಕ್ಷಿಸಿದ್ದಾನೆ. ಪ್ರೀತಿಗೆ ವೈದ್ಯಕೀಯ ಮತ್ತು ವೈಜ್ಞಾನಿಕ ವಿವರಣೆಗಳನ್ನೂ ನೀಡಲಾಗಿದೆ.

ಜೀವ ವಿಜ್ಞಾನದ ಪ್ರಕಾರ, ಪ್ರೀತಿ ಎನ್ನುವುದು ಮನುಷ್ಯನ ಮೂಲಭೂತ ಆಂತರಿಕ ಪ್ರಚೋದನೆಗಳಾದ ಹಸಿವು, ನೀರಡಿಕೆಗಳಷ್ಟೇ ಸಹಜ ಪ್ರವೃತ್ತಿ. ಹಾಗಾಗಿ ಪ್ರತಿ ಮನುಷ್ಯರಿಗೂ ರಮ್ಯ ಪ್ರೀತಿಯ ಆಸೆಯಿರುತ್ತದೆ.

ಹೆಲೆನ್ ಫಿಷರ್ ಎನ್ನುವ ಮಾನವ ಶಾಸ್ತ್ರಜ್ಞೆ (Anthropologist) ರಮ್ಯ ಪ್ರೀತಿಯನ್ನು ಮೂರು ಹಂತಗಳಲ್ಲಿ ವಿವರಿಸುತ್ತಾಳೆ. ಅವುಗಳೆಂದರೆ – ಆಕರ್ಷಣೆ (Attraction), ಕಾಮ (lust) ಮತ್ತು ಅವಲಂಬನೆ (attachment). ಈ ಮೂರೂ ಹಂತಗಳು ಪ್ರೀತಿ ಪರಿಪೂರ್ಣವಾಗಲು ಬೇಕೆನ್ನುವುದು ಹೆಲೆನ್‌ಳ ವಿವರಣೆ.

ಆಕರ್ಷಣೆ ನಮ್ಮ ಗಮನವನ್ನು ಪ್ರೀತಿ ಪಾತ್ರರ ಕಡೆ ಸೆಳೆಯುತ್ತದೆ. ಕಾಮದಲ್ಲಿ ಸಂತೋಷ ಮತ್ತು

ಪ್ರೀತಿ ಇಲ್ಲದ ಮೇಲೆ
ಹೂವು ಅರಳೀತು ಹೇಗೆ?
ಮೋಡ ಕಟ್ಟೀತು ಹೇಗೆ?
ಹನಿಯೊಡೆದು ಕೆಳಗಿಳಿದು
ನೆಲಕ್ಕೆ ಹಸಿರು ಮೂಡೀತು ಹೇಗೆ?

–ಜಿ. ಎಸ್. ಶಿವರುದ್ರಪ್ಪ

